ಡಿ. ಡಬ್ಲ್ಯೂ ಃ 1

**ಸಾಕ್ಷಿಗೆ ದಿನಾಂಕ 02.04.2026 ರಂದು ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ವಾದಿ ಪರ ಶ್ರೀ B.S.Y ವಕೀಲರಿಂದ**

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು 8 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಹಾಜರುಪಡಿಸಿದ ದಾಖಲೆಗಳನ್ನು ಹೊರತುಪಡಿಸಿ ನನ್ನ ಬಳಿ ಬೇರೆ ಯಾವುದೇ ದಾಖಲೆಗಳು ಇಲ್ಲ. ನಿಡಿ-2 ಪಹಣಿ ಪತ್ರಿಕೆ ವಾದಿಯ ತಂದೆಯ ಹೆಸರಿನಲ್ಲಿರುತ್ತದೆ. ನಿಡಿ-3 ಮತ್ತು 4 ಪಹಣಿ ಪತ್ರಿಕೆ ಹಾಗೂ ಮ್ಯುಟೇಶನ್ ಪ್ರಕಾರ ವಾದಿಯರ ತಂದೆ ತೀರಿಕೊಂಡ ನಂತರ ಪೌತಿ ಆಧಾರದ ಮೇಲೆ ವಾದಿಯರ ಹೆಸರಿಗೆ ಜಂಟಿ ಖಾತೆ ಆಗಿದೆ ಎಂದರೆ ಸರಿ. ವಾದಿಯರ ತಂದೆ ತೀರಿಕೊಂಡ ನಂತರ ವಾದಿಯರು ತನ್ನ ತಂದೆ ಮರಣ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಒಬ್ಬ ವ್ಯಕ್ತಿ ಎಲ್ಲಿ ತೀರಿಕೊಂಡಿರುತ್ತಾರೋ ಆ ವ್ಯಾಪ್ತಿಗೆ ಬರುವ ಜನನ ಮತ್ತು ಮರಣ ನೊಂದಾಣಾಧಿಕಾರಿಗಳು ಮರಣ ಪ್ರಮಾಣ ಪತ್ರ ನೀಡುತ್ತಾರೆ ಎಂದರೆ ಸರಿ. ವಾದಿಯರ ತಂದೆ ಸೋಮವಾರ ಪೇಟೆ ತಾಲ್ಲೂಕಿನ ಬಿದುರೂರಿನಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತು ವಾದಿಯರ ತಂದೆಗೆ ಸರ್ಕಾರದಿಂದ ಮಂಜೂರಾದ ಸ್ವತ್ತು. ವಾದಿಯರು ಅಬ್ದುಲ್ ಮಜೀದರವರ ಮಕ್ಕಳು ಎಂದರೆ ಸರಿ. ವಾದಿಯರನ್ನು ಹೊರತುಪಡಿಸಿ ಅಬ್ದುಲ್ ಮಜೀದರವರಿಗೆ ಬೇರೆ ಯಾರು ಮಕ್ಕಳು ಇಲ್ಲ ಎಂದರೆ ಸರಿ. ವಾದಿಯರನ್ನು ಹೊರತುಪಡಿಸಿ ದಾವಾ ಸ್ವತ್ತಿಗೆ ಬೇರೆ ಯಾರಿಗೂ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿ.

ನಿಡಿ-1 ರ ಮೃತ್ಯ ಪತ್ರವನ್ನು ಯಾರು ಯಾರು ಪರವಾಗಿ ಬರೆದಿರುತ್ತಾರೆ ಹಾಗೂ ಎಲ್ಲಿ ಬರೆದಿರುತ್ತಾರೆ ನನಗೆ ಗೊತ್ತಿಲ್ಲ. ಮೃತ್ಯ ಪತ್ರಕ್ಕೆ ಎಷ್ಟು ಜನ ಸಾಕ್ಷಿದಾರರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ತಮಗೆ ಸೇರಬೇಕು ಎಂದು ವಾದಿಯರು ದಾವೆ ಸಲ್ಲಿಸಿರುತ್ತಾರೆ. ನಿಡಿ-2 ರಿಂದ 4 ರ ಪ್ರಕಾರ ವಾದಿಯರೇ ದಾವಾ ಸ್ವತ್ತಿಗೆ ಮಾಲೀಕರು ಎಂದರೆ ಸರಿ ಸಾಕ್ಷಿ ಇತ್ತೀಚೆಗೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯರ ಹೆಸರಿನಲ್ಲಿರುವ ಖಾತೆಯನ್ನು ನಾನು ಎಲ್ಲಿಯೂ ಸಹ

ಪ್ರಶ್ನೆ ಮಾಡಿಲ್ಲ. ಮೃತ್ಯ ಪತ್ರಕ್ಕೆ ಸಂಬಂಧಿಸಿದಂತೆ ನಾನು ಪ್ರೊಬೇಟ್ ಪ್ರಮಾಣ ಪತ್ರವನ್ನು ಪಡೆದುಕೊಂಡಿಲ್ಲ. ನಿಡಿ-1 ಮೃತ್ಯ ಪತ್ರ ಸೃಷ್ಟಿಸಿದ ಮೃತ್ಯ ಪತ್ರವಾಗಿದ್ದರಿಂದ ಪ್ರೋಬೇಟ್ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ವಿಚಾರಗಳು ಗೊತ್ತಿರುತ್ತದೆ ಎಲ್ಲವೂ ಸತ್ಯವಾಗಿರುತ್ತವೆ. ನನಗೆ ವಾದಿಗಳು ಹಾಗೂ ಪ್ರತಿವಾದಿಗಳು ಎಂದರೆ ಅರ್ಥ ಆಗುತ್ತದೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಪ್ರತಿವಾದಿಗಳು ದಾವಾ ಸ್ವತ್ತನ್ನು ಲಪಾಟಿಸುವ ಉದ್ದೇಶದಿಂದ ಅವರ ತಂದೆ ನಮ್ಮ ತಂದೆಗೆ ನೊಂದಾಯಿತ ಮರಣ ಪತ್ರವನ್ನು ಬರೆದುಕೊಟ್ಟಿದ್ದು ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಯಲಾಗಿದೆ ಎಂದರೆ ಸರಿ.

ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನದಲ್ಲಿದ್ದೇನೆ ಎಂದು ತೋರಿಸಲು ದಾಖಲೆಗಳು ಇವೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ನನ್ನ ಮಾಲೀಕತ್ವ ಸ್ವಾಧೀನತೆ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ಅಬ್ದುಲ್ ಮಜೀದರವರ ತಂದೆಯ ಹೆಸರು ಇಸ್ಮಾಯಲ್ ಸಾಬ. ವಾದಿಯರು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದು ವಾದಿಯರನ್ನು ಹೆದರಿಸಿ ಬೆದರಿಸಿ ಗಲಾಟೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯರು ನಾನು ಗಲಾಟೆ ಮಾಡಿದ ವಿಚಾರವಾಗಿ ಸಂಬಂಧಪಟ್ಟ ಠಾಣೆಯಲ್ಲಿ ದೂರು ನೀಡಿರುತ್ತಾರೆ ಎಂದರೆ ಸರಿ. ಪೊಲೀಸರು ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ಬುದ್ಧಿವಾದ ಹೇಳಿದರು ಎಂದರೆ ಸರಿ. 1996-97 ರ ಸಾಲಿನಲ್ಲಿ ಮಂಜೂರಾತಿ ಪ್ರಕಾರ ವಾದಿಯರ ತಂದೆಗೆ ಎಮ್.ಆರ್ ನಂಬರ 39/1996-97 ರಂತೆ ಖಾತೆ ಬದಲಾವಣೆಗೆಯಾಗಿರುತ್ತದೆ ಎಂದರೆ ಸರಿ. 1996-97 ರಿಂದ ವಾದಿಯರ ತಂದೆ ಸ್ವಾಧೀನದಲ್ಲಿದ್ದು ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ವಾದಿಯರ ತಂದೆಗೆ ವಯಸ್ಸಾಗಿದ್ದರಿಂದ ಸೋಮವಾರ ಪೇಟೆಗೆ ಹೋಗಿ ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ನಾನು ಅವರ ಯೋಗ ಕ್ಷೇಮವನ್ನು ನೋಡಿಕೊಳ್ಳುತ್ತಿದೆ ಎಂದು ನುಡಿಯುತ್ತಾರೆ. ವಾದಿಯ ತಂದೆ ಸೋಮವಾರ ಪೇಟೆಯಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ.

ವಾದಿಯರ ತಂದೆಯ ಯೋಗ ಕ್ಷೇಮವನ್ನು ನಾನು ನೋಡಿಕೊಳ್ಳುತ್ತಿದ್ದೇನು ಎಂದು ತೋರಿಸಲು ಮೃತ್ಯ ಪತ್ರವನ್ನು ಹಾಜರುಪಡಿಸಿರುತ್ತೇನೆ. ಕಾಳೇನಹಳ್ಳಿ ವಾದಿಯರ ತಂದೆ ಅನಾರೋಗ್ಯದಿಂದ ಇದ್ದು ಅವರನ್ನು ನಾನು ನೋಡಿಕೊಳ್ಳುತ್ತಿದ್ದೇನು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ ಹಾಗೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಪ್ರತಿವಾದಿಗಳು ಎಂದಿಗೂ ಸಹ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರುವುದಿಲ್ಲ ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿ ಆ ರೀತಿ ಸುಳ್ಳಾಗಿ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳಿಗೆ ದಾವಾ ಆಸ್ತಿಗಳ ಮೇಲೆ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುತ್ತದೆ ಎಂದರೆ ಸರಿ. ನಮಗೂ ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರು ಸಹ ಮೃತ್ಯ ಪತ್ರವನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇಲ್ಲದೇ ಇದ್ದರು ಸಹ ವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂಬರ 748 ರಲ್ಲಿ ಒಟ್ಟು 25 ಎಕರೆ ಜಮೀನು ಇದೆ. ದಾವಾ ಸ್ವತ್ತಿನ ಪಕ್ಕದಲ್ಲಿ ನನಗೆ ಸೇರಿದ 01 ಎಕರೆ ಜಮೀನು ಇದೆ. 01 ಎಕರೆ ಜಮೀನು ಇದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ನನಗೆ 01 ಎಕರೆ ಜಮೀನು ಇದೆ ಎಂದು ಹೇಳಿದ್ದು ಅದರ ಜೊತೆ ವಾದಿಯರಿಗೆ ಸೇರಿದ ದಾವಾ ಸ್ವತ್ತನ್ನು ಸಹ ಕಬಳಿಸುವ ಉದ್ದೇಶದಿಂದ ವಾದಿಯರ ಸ್ವಾಧೀನಕ್ಕೆ ತೊಂದರೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸರಿ ಇದೆ.**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಹುಣಸೂರು.**